THE HINDU MANGALURU
MONDAY, MAY 30, 2022

## Kasturba Hospital gets NABL re-accreditation

MANGALURU

Kasturba Hospital, Manipal Laboratory Services, is re-accredited with National Accreditation Board for Testing and Calibration Laboratories (NABL), which is a Constituent Board of Quality Council of India. A release said that Manipal Academy of Higher Education Pro Chancellor H.S. Ballal and Vice-Chancellor M.D. Venkatesh jointly handed over the certificate of accreditation to Ravindra Maradi, Director of Kasturba Hospital Laboratory Services, and others on Saturday. Dr. Maradi said that the accreditation is valid for two years.

ಕನ್ನಡಪ್ರಭ
ಶನಿವಾರ 28.5.2022

# ಕೆಎಂಸಿ ಲ್ಯಾಬ್‌ಗಳಿಗೆ ಎನ್‌ಎಬಿಎಲ್ ಮಾನ್ಯತೆ




ಮಾನ್ಯತಾಪತ್ರವನ್ನು ಶುಕ್ರವಾರ ಮಾಹೆ ಮಣಿಪಾಲದ ಸಹಕುಲಾಧಿಪತಿ ಡಾ. ಎಚ್.ಎಸ್. ಬಲ್ಲಾಳ್, ಉಪಕುಲಪತಿ ಲೆ.ಜ. ಎಂ.ಡಿ. ವೆಂಕಟೇಶ್ ಅವರು ಜಂಟಿಯಾಗಿ ಕೆಎಂಸಿಯ ಡೀನ್ ಡಾ. ಶರತ್ ಕೆ.ರಾವ್, ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ ಶೆಟ್ಟಿ, ಆಸ್ಪತ್ರೆ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ. ರವೀಂದ್ರ ಮರಡಿ ಅವರಿಗೆ ಹಸ್ತಾಂತರಿಸಿದರು.

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯ ಪ್ರಯೋಗಾಲಯ ಸೇವಾ ವಿಭಾಗವು ಭಾರತೀಯ ಗುಣಮಟ್ಟ ಮಂಡಳಿಯ ಅಂಗಸಂಸ್ಥೆಯಾದ ನ್ಯಾಷನಲ್ ಅಕ್ರೆಡಿಟೇಶನ್ ಬೋರ್ಡ್ ಫಾರ್ ಟೆಸ್ಟಿಂಗ್ ಮತ್ತು ಕ್ಯಾಲಿಬ್ರೇಶನ್ ಲ್ಯಾಬೋರೇಟರೀಸ್ (ಎನ್‌ಎಬಿಎಲ್) ನಿಂದ ಮಾನ್ಯತೆ ಪಡೆದಿದೆ.

ಈ ಬಗ್ಗೆ ಮಾನ್ಯತಾಪತ್ರವನ್ನು ಶುಕ್ರವಾರ ಮಾಹೆ ಮಣಿಪಾಲದ ಸಹಕುಲಾಧಿಪತಿ ಡಾ. ಎಚ್.ಎಸ್. ಬಲ್ಲಾಳ್, ಉಪಕುಲಪತಿ ಲೆ.ಜ. ಎಂ.ಡಿ. ವೆಂಕಟೇಶ್ ಅವರು ಜಂಟಿಯಾಗಿ ಕೆಎಂಸಿಯ ಡೀನ್ ಡಾ. ಶರತ್ ಕೆ.ರಾವ್, ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ ಶೆಟ್ಟಿ, ಆಸ್ಪತ್ರೆ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ. ರವೀಂದ್ರ ಮರಡಿ ಅವರಿಗೆ ಹಸ್ತಾಂತರಿಸಿದರು.

ಮಾಹೆಯ ವೈದ್ಯಕೀಯ - ದಂತವಿಜ್ಞಾನ ಸಹಉಪಕುಲಪತಿ ಡಾ. ಪಿ.ಎಲ್.ಎನ್.ಜಿ. ರಾವ್, ಆರೋಗ್ಯ - ವಿಜ್ಞಾನ ಸಹಉಪಕುಲಪತಿ ಡಾ. ವೆಂಕಟರಾಯ ಪ್ರಭು, ಕುಲಸಚಿವ ಡಾ.ನಾರಾಯಣ ಸಭಾಹಿತ್, ಪ್ರಯೋಗಾಲಯಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

ಕಸ್ತೂರ್ಬಾ ಆಸ್ಪತ್ರೆಯ ಪ್ರಯೋಗಾಲಯದ 400ಕ್ಕೂ ಹೆಚ್ಚು ಸೇವೆಗಳು ಎನ್‌ಎಬಿಎಲ್. ಪ್ರಮಾಣಿತ ಐಎಸ್‌ಒ 15,189 ಪ್ರಕಾರ ಮುಂದಿನ 2 ವರ್ಷಗಳ ಅವಧಿಗೆಮಾನ್ಯತೆಪಡೆದಿವೆ. ನಮ್ಮಪ್ರಯೋಗಾಲಯದ ವರದಿಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ವೀಕರಿಸಲಾಗುತ್ತದೆ. ಈ ಮಾನ್ಯತೆಯು ರೋಗಿಯ ಪ್ರಯೋಗಾಲಯ ಫಲಿತಾಂಶದ ಗುಣಮಟ್ಟವನ್ನು ಹೆಚ್ಚಿಸಿ, ಅಪಾಯವನ್ನು ಕಡಿಮೆ ಮಾಡುತ್ತದೆ ಎಂದು ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ. ರವೀಂದ್ರ ಮರಡಿ ಹೇಳಿದ್ದಾರೆ.

ಉದಯವಾಣಿ
ಸುದಿನ
ಮಣಿಪಾಲ
2022
ಮೇ 29 । ರವಿವಾರ

▶ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ

# ಪ್ರಯೋಗಾಲಯ ಸೇವೆಗಳಿಗೆ ಎನ್‌ಎಬಿಎಲ್‌ನಿಂದ ಮರುಮಾನ್ಯತೆ




**ಮಣಿಪಾಲ, ಮೇ 28:** ಕಸ್ತೂರ್ಬಾ ಆಸ್ಪತ್ರೆ ಮಣಿಪಾಲದ ಪ್ರಯೋಗಾಲಯ ಸೇವೆಗಳಿಗೆ ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳಿಗೆ ಇರುವ ರಾಷ್ಟ್ರೀಯ ಮಾನ್ಯತೆ ಮಂಡಳಿಯಿಂದ (ನ್ಯಾಷನಲ್ ಅಕ್ರೆಡಿಟೇಶನ್ ಬೋರ್ಡ್ ಫಾರ್ ಟೆಸ್ಟಿಂಗ್ ಮತ್ತು ಕ್ಯಾಲಿಬ್ರೇಶನ್ ಲ್ಯಾಬೋರೇಟರೀಸ್) ಮರುಮಾನ್ಯತೆ ಪಡೆದಿದೆ. ಇದು ಭಾರತದ ಗುಣಮಟ್ಟ ಮಂಡಳಿಯ ಅಂಗ ಸಂಸ್ಥೆಯಾಗಿದೆ. ಮಾಹೆ ಮಣಿಪಾಲದ ಸಹ ಕುಲಾಧಿಪತಿ ಡಾ। ಎಚ್. ಎಸ್. ಬಲ್ಲಾಳ್, ಉಪಕುಲಪತಿ ಲೆಫ್ಟಿನೆಂಟ್ ಜನರಲ್ ಡಾ। ಎಂ.ಡಿ.ವೆಂಕಟೇಶ್ ಅವರು ಜಂಟಿಯಾಗಿ ಕೆಎಂಸಿ ಡೀನ್ ಡಾ। ಶರತ್ ಕೆ.ರಾವ್, ವೈದ್ಯಕೀಯ ಅಧೀಕ್ಷಕ ಡಾ। ಅವಿನಾಶ ಶೆಟ್ಟಿ ಕಸ್ತೂರ್ಬಾ ಆಸ್ಪತ್ರೆ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ। ರವೀಂದ್ರ ಮರಡಿ ಅವರಿಗೆ ಮಾನ್ಯತಾ ಪ್ರಮಾಣಪತ್ರ ಹಸ್ತಾಂತರಿಸಿದರು.

ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಈ ಮಾನ್ಯತೆ ಕೊಡಿಸುವ ಮೂಲಕ ಮತ್ತೊಂದು ಕಿರೀಟ ತೊಡಿಸಲು ಕಾರಣರಾದ ಇಡೀ ತಂಡವನ್ನು ಡಾ। ಎಚ್. ಎಸ್.ಬಲ್ಲಾಳ್ ಅವರು ಅಭಿನಂದಿಸಿದರು.

ಡಾ। ಎಂ.ಡಿ.ವೆಂಕಟೇಶ್ ಮಾತನಾಡಿ, ಯಾವುದೇ ಸಂಸ್ಥೆಗೆ ಗುಣಮಟ್ಟ ಮತ್ತು ಪ್ರಮಾಣೀಕರಣ ಮಾನ್ಯತೆ ಬಹಳ ಮುಖ್ಯ. ಇದರಲ್ಲಿ ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ 'ಯಾವಾಗಲೂ ಮುಂಚೂಣಿಯಲ್ಲಿದೆ ಮತ್ತು ಇದು ನಿರಂತರ ಪ್ರಕ್ರಿಯೆಯಾಗಿದೆ. ಎಲ್ಲ ಹೊಸ ಸಾಧನೆಗಳು ನಮಗೆ ಹೆಚ್ಚಿನ ಜವಾಬ್ದಾರಿಯನ್ನು ನೀಡುತ್ತದೆ. ಸಾರ್ವಜನಿಕರಿಗೆ ಪ್ರಯೋಗಾಲಯ ಸೇವೆಗಳಲ್ಲಿ ಗುಣಮಟ್ಟದ ಸೇವೆ ನೀಡಲು ಈ ಮಾನ್ಯತೆ ಸಹಾಯ ಮಾಡುತ್ತದೆ ಎಂದರು. ಮಾಹೆ ಮಣಿಪಾಲದ ಸಹ ಕುಲಪತಿ ಡಾ। ಪಿ.ಎಲ್.ಎನ್.ಜಿ.ರಾವ್, ಸಹ ಉಪ ಕುಲಪತಿ ಡಾ। ವೆಂಕಟರಾಯ ಪ್ರಭು, ಕುಲಸಚಿವ ಡಾ। ನಾರಾಯಣ ಸಭಾಹಿತ್, ಎಲ್ಲ ಪ್ರಯೋಗಾಲಯಗಳ ಮುಖ್ಯಸ್ಥರು ಮತ್ತು ಆಸ್ಪತ್ರೆಯ ನಿರ್ವಹಣಾ ಸಿಬಂದಿ ಉಪಸ್ಥಿತರಿದ್ದರು. ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ। ರವೀಂದ್ರ ಮರಡಿ ಮಾತನಾಡಿ, ಇಲ್ಲಿನ ಪ್ರಯೋಗಾಲಯವು ವಿಶ್ವಾಸಾರ್ಹ ಪರೀಕ್ಷೆ ಮತ್ತು ವರದಿಗಳಿಗಾಗಿ ಕಟ್ಟುನಿಟ್ಟಾದ ಗುಣಮಟ್ಟದ ಕ್ರಮವನ್ನು ಅನುಸರಿಸುತ್ತದೆ. ನಮ್ಮ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ನೀಡಿದ ವರದಿಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯವಾಗಿ ಸ್ವೀಕರಿಸಲಾಗುತ್ತದೆ. ಈ ಮಾನ್ಯತೆಯು ರೋಗಿಯ ಪ್ರಯೋಗಾಲಯ ಫಲಿತಾಂಶದ ಗುಣಮಟ್ಟವನ್ನು ಸುಧಾರಿಸುತ್ತದೆ. ಅಪಾಯಗಳನ್ನು ಕಡಿಮೆ ಮಾಡಿ ಗುಣಮಟ್ಟ ಮತ್ತು ಸುರಕ್ಷತೆಯ ಸಂಸ್ಕೃತಿಯನ್ನು ಬೆಳೆಸುತ್ತದೆ ಎಂದರು.

ಪ್ರಜಾವಾಣಿ
ಶನಿವಾರ • ಮೇ 28, 2022

# ಕೆಎಂಸಿ: ಎನ್‌ಎಬಿಎಲ್‌ನಿಂದ ಮರು ಮಾನ್ಯತೆ

## ಆಸ್ಪತ್ರೆಯ ಪ್ರಯೋಗಾಲಯ ಸೇವೆಯಲ್ಲಿ ಗುಣಮಟ್ಟ: ಡಾ. ರವೀಂದ್ರ ಮರಡಿ

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ಪ್ರಯೋಗಾಲಯ ಸೇವೆಗಳಿಗೆ 'ನ್ಯಾಷನಲ್ ಅಕ್ರೆಡಿಟೇಶನ್ ಬೋರ್ಡ್ ಫಾರ್ ಟೆಸ್ಟಿಂಗ್ ಹಾಗೂ ಕ್ಯಾಲಿಬ್ರೇಷನ್ ಲ್ಯಾಬೋರೇಟರಿಸ್ (ಎನ್‌ಎಬಿಎಲ್) ಮರುಮಾನ್ಯತೆ ನೀಡಿದೆ.

ಎನ್‌ಎಬಿಎಲ್ ಭಾರತದ ಗುಣಮಟ್ಟ ಮಂಡಳಿಯ ಅಂಗ ಸಂಸ್ಥೆಯಾಗಿದೆ. ಮಾಹೆ ಮಣಿಪಾಲ ಸಹ ಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್, ಕುಲಪತಿ ಲೆಫ್ಟಿನೆಂಟ್ ಜನರಲ್ ಎಂ.ಡಿ. ವೆಂಕಟೇಶ್ ಜಂಟಿಯಾಗಿ ಕೆಎಂಸಿ ಡೀನ್ ಡಾ.ಶರತ್ ಕೆ.ರಾವ್, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ ಶೆಟ್ಟಿ, ಆಸ್ಪತ್ರೆಯ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ. ರವೀಂದ್ರ ಮರಡಿ ಅವರಿಗೆ ಶುಕ್ರವಾರ ಮಾನ್ಯತಾ ಪ್ರಮಾಣಪತ್ರ ಹಸ್ತಾಂತರಿಸಿದರು.

ನ್ಯಾಕ್ ತಂಡವು ಈಚೆಗೆ ಆಸ್ಪತ್ರೆಗೆ ಭೇಟಿನೀಡಿ ಮಾಹೆ ಸಂಸ್ಥೆಯ ಗುಣಮಟ್ಟದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿತ್ತು ಎಂದು ಮಾಹೆ ಸಹ ಕುಲಾಧಿಪತಿ ಡಾ. ಎಚ್.ಎಸ್.ಬಲ್ಲಾಳ್ ಹೇಳಿದರು.

ಕುಲಪತಿ ಎಂ.ಡಿ.ವೆಂಕಟೇಶ್ ಮಾತನಾಡಿ, ಗುಣಮಟ್ಟ ಮತ್ತು ಪ್ರಮಾಣೀಕರಣ ಮಾನ್ಯತೆ ಸಂಸ್ಥೆಗೆ ಬಹಳ ಮುಖ್ಯ. ಮಣಿಪಾಲದ ಕಸ್ತೂರಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಗುಣಮಟ್ಟ ಹಾಗೂ ಪ್ರಮಾಣೀಕರಣ ಮಾನ್ಯತೆ ಪಡೆಯುವಲ್ಲಿ ಸದಾ ಮುಂಚೂಣಿಯಲ್ಲಿದೆ ಎಂದರು.

ನಿರಂತರ ಸಾಧನೆಗಳು ಹೆಚ್ಚಿನ ಜವಾಬ್ದಾರಿಯನ್ನು ನೀಡುತ್ತದೆ. ಆಸ್ಪತ್ರೆಯ ಪ್ರಯೋಗಾಲಯದಲ್ಲಿ ಮತ್ತಷ್ಟು ಗುಣಮಟ್ಟದ ಸೇವೆ ನೀಡಲು ಎನ್‌ಎಬಿಎಲ್ ಮಾನ್ಯತೆ ನೆರವಾಗಲಿದೆ ಎಂದರು.

ಮಾಹೆ ಸಹ ಕುಲಪತಿ ಡಾ.ಪಿ. ಎಲ್.ಎನ್.ಜಿ.ರಾವ್, ಡಾ. ವೆಂಕಟರಾಯ ಪ್ರಭು, ಕುಲಸಚಿವ ಡಾ. ನಾರಾಯಣ ಸಭಾಹಿತ್ ಪ್ರಯೋಗಾಲಯಗಳ ಮುಖ್ಯಸ್ಥರು ಮತ್ತು ಆಸ್ಪತ್ರೆಯ ನಿರ್ವಹಣಾ ಸಿಬ್ಬಂದಿ ಕಾರ್ಯಕ್ರಮದಲ್ಲಿ ಇದ್ದರು.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ. ರವೀಂದ್ರ ಮರಡಿ ಮಾತನಾಡಿ, ಎನ್‌ಎಬಿಎಲ್ ಆಸ್ಪತ್ರೆ ಪ್ರಯೋಗಾಲಯ ಸೇವೆಗಳ ಮಾನ್ಯತೆಯನ್ನು 2024ರವರೆಗೆ ಮರುನವೀಕರಿಸಿದೆ. ಪ್ರಮಾಣಿತ ಐಎಸ್‌ಒ 15189 ಪ್ರಕಾರ ಎನ್‌ಎಬಿಎಲ್‌ನಿಂದ 400ಕ್ಕೂ ಹೆಚ್ಚು ಪರೀಕ್ಷೆಗಳು ಮಾನ್ಯತೆ ಪಡೆದಿವೆ.

ಆಸ್ಪತ್ರೆಯ ಪ್ರಯೋಗಾಲಯ ವಿಭಾಗವು ವಿಶ್ವಾಸಾರ್ಹ ಪರೀಕ್ಷೆ ಮತ್ತು ವರದಿಗಳನ್ನು ಪಡೆಯಲು ಕಟ್ಟುನಿಟ್ಟಾದ ಗುಣಮಟ್ಟದ ಕ್ರಮವನ್ನು ಅನುಸರಿಸುತ್ತಿದೆ. ಪ್ರಯೋಗಾಲಯದಲ್ಲಿ ಪರೀಕ್ಷಿಸಿ ನೀಡಿದ ವರದಿಗಳನ್ನು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯವಾಗಿ ಸ್ವೀಕರಿಸಲಾಗುತ್ತದೆ ಎಂದರು.

ಎನ್‌ಎಬಿಎಲ್ ಮಾನ್ಯತೆಯು ರೋಗಿಯ ಪ್ರಯೋಗಾಲಯದ ಫಲಿತಾಂಶದ ಗುಣಮಟ್ಟವನ್ನು ಸುಧಾರಿಸಿ ಅಪಾಯಗಳನ್ನು ಕಡಿಮೆ ಮಾಡುತ್ತದೆ. ಗುಣಮಟ್ಟ ಮತ್ತು ಸುರಕ್ಷತೆಯ ಸಂಸ್ಕೃತಿಯನ್ನು ಬೆಳೆಸುತ್ತದೆ ಎಂದರು.




ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ಪ್ರಯೋಗಾಲಯ ಸೇವೆಗಳಿಗೆ ಎನ್‌ಎಬಿಎಲ್ ನೀಡಿರುವ ಮರು ಮಾನ್ಯತೆ ಪ್ರಮಾಣಪತ್ರವನ್ನು ಮಾಹೆ ಮಣಿಪಾಲ ಸಹ ಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್, ಕುಲಪತಿ ಲೆಫ್ಟಿನೆಂಟ್ ಜನರಲ್ ಎಂ.ಡಿ. ವೆಂಕಟೇಶ್ ಜಂಟಿಯಾಗಿ ಕೆಎಂಸಿ ಡೀನ್ ಡಾ.ಶರತ್ ಕೆ.ರಾವ್, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ ಶೆಟ್ಟಿ, ಆಸ್ಪತ್ರೆಯ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ. ರವೀಂದ್ರ ಮರಡಿ ಅವರಿಗೆ ಹಸ್ತಾಂತರಿಸಿದರು.

**ಮುಖ್ಯಾಂಶಗಳು**

- ಮಾನ್ಯತಾ ಪ್ರಮಾಣಪತ್ರ ಹಸ್ತಾಂತರ
- 'ಪರೀಕ್ಷೆ, ವರದಿ ಪಡೆಯಲು ಕಟ್ಟುನಿಟ್ಟಿನ ಕ್ರಮ'
- 'ಫಲಿತಾಂಶದ ಗುಣಮಟ್ಟದಿಂದ ಅಪಾಯ ಕಡಿಮೆ'

ವಿಜಯವಾಣಿ
VIJAYAVANI » MANGALURU
ಶನಿವಾರ 28 ಮೇ 2022
28 MAY 2022

# ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಪ್ರಯೋಗಾಲಯ ಸೇವೆಗಳಿಗೆ ಮರುಮಾನ್ಯತೆ

ವಿಜಯವಾಣಿ ಸುದ್ದಿಜಾಲ ಉಡುಪಿ

ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ ಪ್ರಯೋಗಾಲಯ ಸೇವೆಗಳಿಗೆ ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳಿಗೆ ಇರುವ ರಾಷ್ಟ್ರೀಯ ಮಾನ್ಯತೆ ಮಂಡಳಿಯಿಂದ (ನ್ಯಾಷನಲ್ ಅಕ್ರೆಡಿಟೇಶನ್ ಬೋರ್ಡ್ ಫಾರ್ ಟೆಸ್ಟಿಂಗ್ ಮತ್ತು ಕ್ಯಾಲಿಬ್ರೇಶನ್ ಲ್ಯಾಬೋರೇಟರೀಸ್) ಮರುಮಾನ್ಯತೆ ಪಡೆದಿವೆ. ಇದು ಭಾರತದ ಗುಣಮಟ್ಟ ಮಂಡಳಿಯ ಅಂಗ ಸಂಸ್ಥೆಯಾಗಿದೆ.

ಶುಕ್ರವಾರ ಮಾಹೆ ಮಣಿಪಾಲದ ಸಹ ಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್, ಉಪಕುಲಪತಿ ಲೆಫ್ಟಿನೆಂಟ್ ಜನರಲ್ ಡಾ.ಎಂ.ಡಿ.ವೆಂಕಟೇಶ್ ಜಂಟಿಯಾಗಿ ಕೆಎಂಸಿ ಡೀನ್ ಡಾ.ಶರತ್ ಕೆ.ರಾವ್, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ ಶೆಟ್ಟಿ, ಕಸ್ತೂರ್ಬಾ ಆಸ್ಪತ್ರೆ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ.ರವೀಂದ್ರ ಮರಡಿ ಅವರಿಗೆ ಮಾನ್ಯತಾ ಪ್ರಮಾಣಪತ್ರ ಹಸ್ತಾಂತರಿಸಿದರು.

ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಈ ಮಾನ್ಯತೆ ಕೊಡಿಸುವ ಮೂಲಕ ಮತ್ತೊಂದು ಕಿರೀಟ ತೊಡಿಸಲು ಕಾರಣರಾದ ಇಡೀ ತಂಡವನ್ನು ಡಾ.ಎಚ್.ಎಸ್.ಬಲ್ಲಾಳ್ ಅಭಿನಂದಿಸಿ, ನ್ಯಾಕ್ ತಂಡವು ಇತ್ತೀಚೆಗೆ ಭೇಟಿ ನೀಡಿದ್ದು, ಇಡೀ ಮಾಹೆ ಗುಂಪಿನಲ್ಲಿ ನಾವು ನಿರ್ವಹಿಸುತ್ತಿರುವ ಗುಣಮಟ್ಟದ ಬಗ್ಗೆ ತುಂಬಾ ಪ್ರಶಂಸೆ ವ್ಯಕ್ತಪಡಿಸಿದೆ ಎಂದು ಹೇಳಿದರು.

ಮಾಹೆಯ ಉಪಕುಲಪತಿ ಲೆಫ್ಟಿನೆಂಟ್ ಜನರಲ್ ಡಾ.ಎಂ.ಡಿ.ವೆಂಕಟೇಶ್, ಮಾಹೆ ಮಣಿಪಾಲದ ಡಾ.ಪಿ.ಎಲ್.ಎನ್.ಜಿ.ರಾವ್, (ವೈದ್ಯಕೀಯ ಮತ್ತು ದಂತ ವಿಜ್ಞಾನ), ಡಾ.ವೆಂಕಟರಾಯ ಪ್ರಭು (ಸಹ -ಉಪಕುಲಪತಿ ಆರೋಗ್ಯ ವಿಜ್ಞಾನ), ಡಾ.ನಾರಾಯಣ ಸಭಾಹಿತ್, ಕುಲಸಚಿವರು, ಪ್ರಯೋಗಾಲಯಗಳ ಮುಖ್ಯಸ್ಥರು ಮತ್ತು ಆಸ್ಪತ್ರೆಯ ನಿರ್ವಹಣಾ ಸಿಬ್ಬಂದಿ ಉಪಸ್ಥಿತರಿದ್ದರು.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ.ರವೀಂದ್ರ ಮರಡಿ ಅವಲೋಕನ ನೀಡುತ್ತಾ, ನ್ಯಾಷನಲ್ ಅಕ್ರೆಡಿಟೇಶನ್ ಬೋರ್ಡ್ ಫಾರ್ ಟೆಸ್ಟಿಂಗ್ ಮತ್ತು ಕ್ಯಾಲಿಬ್ರೇಶನ್ ಲ್ಯಾಬೋರೇಟರೀಸ್ (ಎನ್ಎಬಿಎಲ್) ಕಸ್ತೂರ್ಬಾ ಆಸ್ಪತ್ರೆ ಪ್ರಯೋಗಾಲಯ ಸೇವೆಗಳು, ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲಕ್ಕೆ 2024ರವರೆಗೆ ಮಾನ್ಯತೆ ನವೀಕರಿಸಿದೆ. ಪ್ರಮಾಣಿತ ಐಎಸ್ಒ 15189 ಪ್ರಕಾರ ಎನ್ಎಬಿಎಲ್‌ನಿಂದ 400 ಕ್ಕೂ ಹೆಚ್ಚು ಪರೀಕ್ಷೆಗಳು ಮಾನ್ಯತೆ ಪಡೆದಿವೆ. ಪ್ರಯೋಗಾಲಯವು ವಿಶ್ವಾಸಾರ್ಹ ಪರೀಕ್ಷೆ ಮತ್ತು ವರದಿಗಳಿಗಾಗಿ ಕಟ್ಟುನಿಟ್ಟಾದ ಗುಣಮಟ್ಟದ ಕ್ರಮವನ್ನು ಅನುಸರಿಸುತ್ತದೆ. ನಮ್ಮ ಪ್ರಯೋಗಾಲಯದಲ್ಲಿ ಪರೀಕ್ಷಿಸಿ ನೀಡಿದ ವರದಿಗಳನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯವಾಗಿ ಸ್ವೀಕರಿಸಲಾಗುತ್ತದೆ. ಈ ಮಾನ್ಯತೆಯು ರೋಗಿಯ ಪ್ರಯೋಗಾಲಯ ಫಲಿತಾಂಶದ ಗುಣಮಟ್ಟವನ್ನು ಸುಧಾರಿಸುತ್ತದೆ, ಅಪಾಯಗಳನ್ನು ಕಡಿಮೆ ಮಾಡುತ್ತದೆ ಮತ್ತು ಗುಣಮಟ್ಟ ಮತ್ತು ಸುರಕ್ಷತೆಯ ಸಂಸ್ಕೃತಿಯನ್ನು ಬೆಳೆಸುತ್ತದೆ ಎಂದು ಹೇಳಿದರು.




ಮಾಹೆ ಮಣಿಪಾಲದ ಸಹ ಕುಲಾಧಿಪತಿ ಡಾ.ಎಚ್.ಎಸ್. ಬಲ್ಲಾಳ್, ಉಪಕುಲಪತಿ ಲೆಫ್ಟಿನೆಂಟ್ ಜನರಲ್ ಡಾ.ಎಂ.ಡಿ.ವೆಂಕಟೇಶ್ ಜಂಟಿಯಾಗಿ ಕೆಎಂಸಿ ಡೀನ್ ಡಾ.ಶರತ್ ಕೆ.ರಾವ್, ವೈದ್ಯಕೀಯ ಅಧೀಕ್ಷಕ ಡಾ.ಅವಿನಾಶ ಶೆಟ್ಟಿ, ಕಸ್ತೂರ್ಬಾ ಆಸ್ಪತ್ರೆ ಪ್ರಯೋಗಾಲಯ ಸೇವೆಗಳ ನಿರ್ದೇಶಕ ಡಾ.ರವೀಂದ್ರ ಮರಡಿ ಅವರಿಗೆ ಶುಕ್ರವಾರ ಮಾನ್ಯತಾ ಪ್ರಮಾಣಪತ್ರ ಹಸ್ತಾಂತರಿಸಿದರು.

ಯಾವುದೇ ಸಂಸ್ಥೆಗೆ ಗುಣಮಟ್ಟ ಮತ್ತು ಪ್ರಮಾಣೀಕರಣ ಮಾನ್ಯತೆ ಬಹಳ ಮುಖ್ಯ. ಇದರಲ್ಲಿ ಮಣಿಪಾಲದ ಕಸ್ತೂರ್ಬಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಯಾವಾಗಲೂ ಮುಂಚೂಣಿಯಲ್ಲಿದೆ ಮತ್ತು ಇದು ನಿರಂತರ ಪ್ರಕ್ರಿಯೆಯಾಗಿದೆ. ಎಲ್ಲ ಹೊಸ ಸಾಧನೆಗಳು ನಮಗೆ ಹೆಚ್ಚಿನ ಜವಾಬ್ದಾರಿ ನೀಡುತ್ತದೆ. ಸಾರ್ವಜನಿಕರಿಗೆ ಪ್ರಯೋಗಾಲಯ ಸೇವೆಗಳಲ್ಲಿ ಗುಣಮಟ್ಟದ ಸೇವೆ ನೀಡಲು ಈ ಮಾನ್ಯತೆ ಸಹಾಯ ಮಾಡುತ್ತದೆ.

ಲೆಫ್ಟಿನೆಂಟ್ ಜನರಲ್ ಡಾ.ಎಂ.ಡಿ.ವೆಂಕಟೇಶ್ ಮಾಹೆಯ ಉಪಕುಲಪತಿ

**Other Links:**

- Udupi Times - https://udupitimes.com/udupi-times-9445/
- The Canara Post - https://bit.ly/3MWGVej
- Karavali Xpress - https://karavalixpress.com/news/kmc-32/